ಇದ್ದಾವೆ. ಅಲ್ಲಿ ತೋಟಗಾರಿಕಾ ಬೆಳೆಯಾದ ದ್ರಾಕ್ಷಿಯನ್ನು ಹೆಚ್ಚು ಬೆಳೆಯುತ್ತೇವೆ ಅದು drip irrigation ಗೆ ಬಹಳ ಸೂಕ್ತವಾಗಿದೆ. ನಮ್ಮಲ್ಲಿ ಲಭ್ಯವಿರುವ 2.8 ಟಿ.ಎಂ.ಸಿ. ನೀರಿನಲ್ಲಿ ನಾವು maximum area ವನ್ನು ಕವರ್ ಮಾಡ ಬೇಕು.

ಗೋವಿಂದ ಕಾರಜೋಳರವರು ಅನುಮಾನ ಇಟ್ಟುಕೊಳ್ಳಬೇಕಾಗಿಲ್ಲ, ಅದು ನನ್ನ ಮತ ಕ್ಷೇತ್ರಕ್ಕೆ ಬರುತ್ತದೆ. ನಾವು ಉತ್ತರದಲ್ಲಿ ಯೋಜಿಸಲಾಗಿ ರುತ್ತದೆ ಎಂದು ಹೇಳಿದ್ದೇವೆಯೇ ಹೊರತು ಯೋಚಿಸಿ ಎಂದು ಹೇಳಿಲ್ಲ. ಕರ್ನಾಟಕ ನೀರಾವರಿ ನಿಗಮದಿಂದ D P.R ready ಮಾಡುತ್ತಿದ್ದೇವೆ. ಅದನ್ನು ಶೀಘ್ರದಲ್ಲಿಯೇ ಮಾಡಿ ಬರುವಂಥ ಒಂದು ತಿಂಗಳಲ್ಲಿಯೇ ಅದಕ್ಕೆ ಆಡಳಿತಾತ್ಮಕ ಅನುಮೋದನೆಯನ್ನು ಪಡೆದುಕೊಂಡು ನಾವು ಟೆಂಡರ್ ಕರೆಯುತ್ತೇವೆ.

ಶ್ರೀ ಗೋವಿಂದ ಎಂ ಕಾರಜೋಳ : ಒಂದು ತಿಂಗಳಲ್ಲಿ ಮಾಡಿಕೊಡುತ್ತೇವೆ ಎಂದು ಹೇಳಿದುದಕ್ಕೆ ಧನ್ಯವಾದಗಳು.

Distribution of Compensation to Labourers

5(110) ಶ್ರೀ ತನ್ವೀರ್ ಸೇಠ್ . ವಿಧಾನ ಸಭಾ ಸದಸ್ಯರು (ನರಸಿಂಹರಾಜ ಕ್ಷೇತ್ರ) : ಮಾನ್ಯ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೈಸೂರು ನಗರದ ಕೃಷ್ಣರಾಜೇಂದ್ರ ಟೆಕ್ಸ್‌ಟೈಲ್ ಮಿಲ್ ಮುಚ್ಚಿ ಹೋಗಿದ್ದು, ಕಾರ್ಮಿಕರು ಯಾವುದೇ ಪರಿಹಾರ ಇಲ್ಲದೇ ತೊಂದರೆಯಲ್ಲಿರುವುದು ಸರ್ಕಾರದ ಗಮನದಲ್ಲಿಯೇ,

ಆ) ಹಾಗಿದ್ದಲ್ಲಿ, ಕಾರ್ಮಿಕರಿಗೆ ಪರಿಹಾರ ಒದಗಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಬಾಬುರಾವ್ ಚಿಂಚನಸೂರು : (ಮಾನ್ಯ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು)

ಅ) ಹೌದು,

ಆ) ಮೈಸೂರು ನಗರದ ಕೃಷ್ಣ ರಾಜೇಂದ್ರ ಟೆಕ್ಸ್‌ಟೈಲ್ ಮಿಲ್ 1992ರಲ್ಲಿ ಪ್ರಾರಂಭಿಸಲಾಗಿರುತ್ತದೆ. ಕಾರ್ಮಿಕರ ಮುಷ್ಕರ. ಅಸಹಕಾರ ಹಾಗೂ ಇತರೆ ಕಾರಣಗಳಿಂದ ಸದರಿ ಮಿಲ್‌ನ್ನು ಇಂಡಸ್ಟ್ರಿಯಲ್ ಡಿಸ್ಪ್ಯೂಟ್ ಆ್ಯಕ್ಟ್ 1947 ಸೆಕ್ಷನ್ 25(0) ಪ್ರಕಾರ ದಿನಾಂಕ:05–06–1984 ರಂದು ಕಾರ್ಖಾನೆಯನ್ನು ಮುಚ್ಚಲಾಗಿರುತ್ತದೆ. ಈ ಪ್ರಕರಣದಲ್ಲಿ ಸರ್ಕಾರಿ ಸಮಾಪನಾಧಿಕಾರಿಗಳನ್ನು ನೇಮಿಸಲಾಗಿರುತ್ತದೆ.

ಸದರಿ ಮಿಲ್‌ನ ಕಾರ್ಮಿಕರಿಗೆ ಕೇಂದ್ರ ಸರ್ಕಾರದ TWRFS ಯೋಜನೆಯಂತೆ ಪರಿಹಾರ ನೀಡಲು ಅವಕಾಶ ಕಲ್ಪಿಸಲಾಗಿರಿತ್ತದೆ. ಸದರಿ ಯೋಜನೆಯ ಪ್ರಕಾರ ಪರಿಹಾರ ಧನವನ್ನು ಮಂಜೂರು ಮಾಡಲು ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಕೈಮಗ್ಗ ಮತ್ತು ಇಲಾಖೆ ನಿರ್ದೇಶಕರು ದಿನಾಂಕ.06–09–2008 ರಂದು ಅರ್ಹ 1552 ಕಾರ್ಮಿಕರಿಗೆ ಪರಿಹಾರ ಧನ ಕೊಡಲು ಪ್ರಸ್ತಾವನೆಯನ್ನು ಸಲ್ಲಿಸಿದ್ದರು. ಇದರಲ್ಲಿ 484 ಕಾರ್ಮಿಕರಿಗೆ ಈ ಯೋಜನೆಯಡಿ ರೂ.68,72,682/–ಗಳ ಪರಿಹಾರವನ್ನು ಮಂಜೂರು ಮಾಡಿ ಪಾವತಿ ಮಾಡಲಾಗಿರುತ್ತದೆ. ಉಳಿಧ 1068 ಕಾರ್ಮಿಕರಿಗೆ ಕೇಂದ್ರ ಸರ್ಕಾರ ಹಾಗೂ ಭಾರತ ಸರ್ವೋಚ್ಚ ನ್ಯಾಯಾಲಯ ಇವರ ಮಟ್ಟದಲ್ಲಿ ತಡೆಹಿಡಿಯಲಾಗಿರುತ್ತದೆ.

Reply

ಅ) Yes

ಆ) M/s Krishna Rajendra Mill, Mysore was established in the year 1922 Due to the stickes and non-Co-operation of the mill workers the mill got closed on 05-06-1984 as per the section 25(0) of Industrial Dispute Act 1947 Official liquidator was also appointed in this case The employees of the mill were eligible to get the compensation as per the TWRFS scheme of Government of India A proposal was sent to Government of

India by the Director of Handlooms and Textiles on 06-09-2008 for sanction of compensation to 1552 eligible workers Out of which compansasion had been sanctioned and were disbursed under TWRF relief amounting to Rs 68,72,682/- The sanction and disbursement of relief for the remaining 1068 workers is kept in abeyance as per the instructions of Government of India and Honorable Supreme Court of India.

ಶ್ರೀ ತನ್ವೀರ್ ಸೇಠ್ :– ಮಾನ್ಯ ಸಭಾಧ್ಯಕ್ಷರೆ, ಮೈಸೂರು ಒಂದು ಐತಿಹಾಸಿಕ ನಗರ. ಮಹಾರಾಜರ ಕಾಲದಲ್ಲಿ ಒಂದು ಜವಳಿ ಕಾರ್ಖಾನೆ ಪ್ರಾರಂಭವಾಗಿದ್ದು, ಇದು 1984ರಲ್ಲಿ ಯಾವ ಕಾರಣಕ್ಕಾಗಿ ಮುಚ್ಚಿ ಹೋಗಿದೆ ಎನ್ನುವುದನ್ನು ಹೇಳಿದ್ದಾರೆ. ಕಾರಣಗಳು ಬೇರೆ ಇದ್ದರೂ ಸಹ Industrial Disputers Act ಪ್ರಕಾರ Official Liquidator ಅನ್ನು ನೇಮಕ ಮಾಡಿ ಸುಮಾರು 30 ವರ್ಷಗಳು ಕಳೆದಿವೆ. ಅದರ ಪರಿಹಾರ ಇದುವರೆಗೂ ಬಂದಿಲ್ಲ. ಇದುವರೆಗೆ ಆ ಕಾರ್ಖಾನೆ ಖಾಸಗಿಯವರಿಗೆ ಎರಡು ಬಾರಿ ಮಾರಾಟವಾಗಿದ್ದು ಅದರಿಂದ ಬಂದಂಥ ಹಣದ ವಿವರಗಳು ಇವತ್ತಿನವರೆಗೂ ನಮಗೆ ದೊರೆತ್ತಿಲ್ಲ. ಈ ಮಧ್ಯೆ ಕೇಂದ್ರ ಸರ್ಕಾರದಿಂದ ಜವಳಿ ಕಾರ್ಮಿಕರಿಗೆ Rehabilitation Fund ಬಂದಿದ್ದು, ಇದನ್ನು ವಿತರಣೆ ಮಾಡುವಂಥ ಸಂದರ್ಭದಲ್ಲಿ, ಮಾನ್ಯ ಸಚಿವರು ನೀಡಿರುವಂಥ ಉತ್ತರದಲ್ಲಿ, ಇದಕ್ಕೆ ಸರ್ವೋಚ್ಚ ನ್ಯಾಯಾಲಯದ ತಡೆಯಾಜ್ಞೆ ಇದೆ ಹಾಗೂ ಕೇಂದ್ರ ಸರ್ಕಾರದ ತಡೆ ಇದೆ ಎನ್ನುವುದನ್ನು ಹೇಳುತ್ತಾರೆ. ಇದರ ಸ್ಪಷ್ಟವಾದಂಥ ವಿವರಗಳನ್ನು ಉತ್ತರದಲ್ಲಿ ಕೊಟ್ಟಿಲ್ಲ. ಇವತ್ತು ಕಾರ್ಮಿಕರ ಬದುಕು ಬಹಳ ಹೀನಾಯ ಪರಿಸ್ಥಿತಿಯಲ್ಲಿರುವಂಥ ಈ ಸಂದರ್ಭದಲ್ಲಿ 30 ವರ್ಷಗಳು ಕಳೆದರೂ official liquidator ರವರ ಹತ್ತಿರ ಇರುವ ಹಣದ ಮಾಹಿತಿಯನ್ನು ಕೊಟ್ಟಿಲ್ಲ. ಮಾಹಿತಿ ಅಪೂರ್ಣವಾಗಿರುವುದರಿಂದ ಸಚಿವರು ಸ್ಪಷ್ಟವಾದಂಥ ಉತ್ತರ ಕೊಡಬೇಕು ಎಂದು ನಾನು ತಮ್ಮ ಮೂಲಕ ಕೇಳಬಯಸುತ್ತೇನೆ.

ಶ್ರೀ ಬಾಬುರಾವ್ ಚಿಂಚನಸೂರು : 1984ನೇ ಇಸವಿಯಲ್ಲಿ ಈ ಕಾರ್ಖಾನೆ ಮುಚ್ಚಲ್ಪಟ್ಟಿತ್ತು. ಸರ್ಕಾರ ಕೂಡಲೇ 1,552 ಕಾರ್ಮಿಕರಿಗೆ ಪರಿಹಾರ ಕೊಡಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. 484 ಜನ ಕಾರ್ಮಿಕರಿಗೆ ಪರಿಹಾರ ಧನ ನೀಡಲಾಗಿರುತ್ತದೆ. ಉಳಿದವರಿಗೆ ಪರಿಹಾರ ನೀಡುವಷ್ಟರಲ್ಲಿ ದಾವಣಗೆರೆಯ ಶಂಕರ್ ಟೆಕ್ಸ್‌ಟೈಲ್ಸ್ ಮಿಲ್‌ನ ಕಾರ್ಮಿಕರು ಸರ್ವೋಚ್ಚ ನ್ಯಾಯಾಲಯಕ್ಕೆ ಮೊರೆ ಹೋಗಿ ಇವರಂತೆಯೇ ನಮಗೂ ಪರಿಹಾರ ನೀಡಿ ಎಂದು ವಿನಂತಿಸಿದರು. ಸರ್ವೋಚ್ಚ ನ್ಯಾಯಾಲಯವು ಕೆ.ಆರ್.ಟೆಕ್ಸ್‌ಟೈಲ್ಸ್‌ನ ಉಳಿದ ಕಾರ್ಮಿಕರ ಬಗ್ಗೆ ತಡೆಯಾಜ್ಞೆ ನೀಡಿ ಸರ್ಕಾರಕ್ಕೆ ಸೂಚನೆ ನೀಡಿರುತ್ತದೆ. ಕರ್ನಾಟಕ ಸರ್ಕಾರವು ತುರ್ತಾಗಿ ಭಾರತ ಸರ್ಕಾರ ದೊಂದಿಗೆ ಚರ್ಚಿಸಿ ತಡೆಯಾಜ್ಞೆಯನ್ನು ಬೇಗನೆ ತೆರವುಗೊಳಿಸಿ ಕೆ.ಆರ್. ಟೆಕ್ಸ್‌ಟೈಲ್ಸ್‌ನ ಮಿಲ್‌ನ ಉಳಿದ ಕಾರ್ಮಿಕರಿಗೆ ಪರಿಹಾರ ಧನ ನೀಡಲು ಸೂಕ್ತ ಕ್ರಮವನ್ನು ಕೈಗೊಳ್ಳುತ್ತದೆ.

ಶ್ರೀ ತನ್ವೀರ್ ಸೇಠ್ : Official liquidator ವಿಚಾರದ ಬಗ್ಗೆ ತಾವು ಏನು ಹೇಳಲಿಲ್ಲ.

ಶ್ರೀ ಬಾಬುರಾವ್ ಚಿಂಚನಸೂರು : 484 ಜನರಿಗೆ ಪರಿಹಾರ ಧನ ನೀಡಿದೆ. ಉಳಿದವರಿಗೆ ಪರಿಹಾರ ನೀಡುವ ವಿಚಾರದಲ್ಲಿ ಸರ್ವೋಚ್ಚ ನ್ಯಾಯಾಲಯದ ತಡೆಯಾಜ್ಞೆ ಇದೆ.

ಶ್ರೀ ಕೆ.ಆರ್ ರಮೇಶ್ ಕುಮಾರ್ :Factory Close ಆಗಿದ್ದು, Official liquidator appoint ಮಾಡಿ, ಅದಕ್ಕೆ ಸಂಬಂಧಿಸಿದ ಆಸ್ತಿಪಾಸ್ತಿ ಎಲ್ಲವನ್ನೂ ಉಪಯೋಗಿಸಿಕೊಂಡು 30 ವರ್ಷಗಳು ಕಳೆದಿವೆ. ಆ ಕಾರ್ಮಿಕರಿಗೂ ಇವತ್ತಿಗೂ ಮೂರು ಕಾಸು ಸಿಕ್ಕಿಲ್ಲ. ಶೀಘ್ರವಾಗಿ ಅವರ ಜೊತೆ ಸಮಾಲೋಚನೆ ಮಾಡಿ ಬೇಗ ಕೊಟ್ಟುಬಿಡುತ್ತೇವೆಂದು ಹೇಳುತ್ತಿದ್ದಾರೆ. ಯಾವಾಗ ಕೊಡುತ್ತೀರಿ? ಇನ್ನೊಂದು 30 ವರ್ಷವಾದ ಮೇಲೆ ಕೊಡುವಿರಾ? ಆ ಹಣ ಕಾರ್ಮಿಕರದು. ಏನು ಮಾತನಾಡುತ್ತಾರೆ ಇವರು? After a lapse of 30 years, they have not received even a single pie. ಅವರು ಹೇಗೆ ಬದುಕಿರಬೇಕು?

ಅಧ್ಯಕ್ಷರು : ಏನು ಮಾಡಬೇಕೆಂದು ಹೇಳಿ.

Sri K.R.Ramesh Kumar: put a dead line ಇಂತಿಷ್ಟು ದಿವಸಗಳೊಳಗಾಗಿ ಅವರಿಗೆ ಪರಿಹಾರ ಕೊಡಬೇಕೆಂದು ತಾವು ಆದೇಶ ಕೊಡಬೇಕು. ಇಲ್ಲದಿದ್ದರೆ ಅವರು ಹೇಗೆ ಬದುಕಿರಬೇಕು? ಇವರಿಗೆ official liquidator ಅನ್ನು ಅಪಾಯಿಂಟ್ ಮಾಡಲಿಕ್ಕೆ ಆಗುತ್ತದೆ, ಅವರಿಗೆ ಪರಿಹಾರ ಕೊಡಲು ಆಗುವುದಿಲ್ಲವೇ?

ಶ್ರೀ ವೈ.ಎಸ್.ವಿ.ದತ್ತ : ಕೃಷ್ಣ ರಾಜೇಂದ್ರ ಟೆಕ್ಸ್‌ಟೈಲ್ಸ್ ಮಿಲ್‌ದು ಕೋಟ್ಯಾಂತರ ರೂಪಾಯಿ ಆಸ್ತಿ ಇದೆ. ಆ ಆಸ್ತಿಯನ್ನಾದರೂ ವಿಲೇವಾರಿ ಮಾಡಿ ಇವರಿಗೆ ಪರಿಹಾರ ಕೊಡಿ.

ಶ್ರೀ ತನ್ವೀರ್ ಸೇಠ್:– ನಾನೂ ಸಹ ಕಾರ್ಮಿಕ ಸಚಿವನಾಗಿ ಸೇವೆ ಸಲ್ಲಿಸಿದ್ದೇನೆ. ಅದು ಕಾರ್ಮಿಕರ ಹಕ್ಕು. That should be treated as a first statutory liability. ಆ ಕಾರ್ಖಾನೆ ಮಾರಾಟವಾಗಿದೆ, ಅದರ ಹಣ official liquidator ರವರ ಹತ್ತಿರ ಸೇರಿದೆ. ಆ ಹಣವನ್ನು ಕಾರ್ಮಿಕರಿಗೆ ಸಂದಾಯ ಮಾಡಲು ಏನು ತೊಂದರೆಯಾಗಿದೆ ಎನ್ನುವುದನ್ನು ಹೇಳಬೇಕು.

ಶ್ರೀ ಬಾಬುರಾವ್ ಚಿಂಚನಸೂರು : 484 ಜನರಿಗೆ ಪರಿಹಾರಧನ ಕೊಟ್ಟಾಯಿತು. ಉಳಿದವರಿಗೆ ಕೊಡುವಷ್ಟರಲ್ಲಿ ದಾವಣಗೆರೆಯ ಶಂಕರ್ ಟೆಕ್ಸ್‌ಟೈಲ್ಸ್ ಮಿಲ್‌ನವರು ಕೇಂದ್ರ ಸರ್ಕಾರಕ್ಕೆ ಮೊರೆ ಹೋದರು.

ಶ್ರೀ ತನ್ವೀರ್ ಸೇಠ್ : ಕಾರ್ಮಿಕರಿಗೆ ಸಿಗಬೇಕಾಗಿರುವಂಥ ವೇತನ ಪರಿಹಾರ ಮತ್ತು ಕಾರ್ಖಾನೆ ಮುಚ್ಚಿ ಹೋಗಿರುವುದರಿಂದ ನೀಡಬೇಕಾದ ಬೇರೆ ಬಾಬ್ತಿನ ಪರಿಹಾರಗಳನ್ನು 30 ವರ್ಷಗಳು ಕಳೆದರೂ ಇವತ್ತಿನವರೆಗೂ ಕೊಡುವುದಕ್ಕೆ ಆಗಿಲ್ಲ. ಇದರ ಜೊತೆಗೆ, ಕಾರ್ಖಾನೆ ಮಾರಾಟ ಮಾಡಿದ ಹಣ official liquidator ರವರ ಹತ್ತಿರ ಇದ್ದಾಗಲೂ ಏಕೆ ಪರಿಹಾರ ಕೊಡಲು ಸಾಧ್ಯವಾಗಿಲ್ಲ ಎನ್ನುವುದು ನನ್ನ ಪ್ರಶ್ನೆ. ಎರಡನೆಯದು, ಈ ಮಧ್ಯೆ 2008ನೇ ಇಸವಿಯಲ್ಲಿ ಕೇಂದ್ರ ಸರ್ಕಾರ Textile Workers Rehabilitation Fund Scheme ಎಂದು ಜಾರಿ ಮಾಡಿದಂಥ ಸಂದರ್ಭದಲ್ಲಿ ಕರ್ನಾಟಕದಲ್ಲಿ ಅನೇಕ

ಜವಳಿ ಕಾರ್ಖಾನೆಯ ಕಾರ್ಮಿಕರಿಗೆ ಪರಿಹಾರ ಸಿಕ್ಕಿದೆ. ಮೈಸೂರಿನಲ್ಲಿಯೂ ಅನೇಕ ಕಾರ್ಮಿಕರಿಗೆ ಪರಿಹಾರ ಸಿಕ್ಕಿದೆ. ಈ ಕಾರ್ಖಾನೆಯಲ್ಲಿ ಸುಮಾರು 3,200 ಕಾರ್ಮಿಕರು ಕಾರ್ಯ ನಿರ್ವಹಿಸುತ್ತಿದ್ದು, ಇಲಾಖೆಯವರೇ 1,552 ಕಾರ್ಮಿಕರನ್ನು ಪರಿಹಾರಕ್ಕಾಗಿ ಗುರುತಿಸಿದ್ದಾರೆ. 484 ಜನ ಕಾರ್ಮಿಕರಿಗೆ ಪರಿಹಾರ ಸಿಕ್ಕಿತು. ಉಳಿದ ಹಣ ಖಾತೆಯಲ್ಲಿದೆ ಅದನ್ನು ಬಿಡುಗಡೆ ಮಾಡಲು ಏನು ಮಾಡಬೇಕು ಎನ್ನುವುದನ್ನು ಹೇಳಿ.

ಶ್ರೀ ಬಾಬುರಾವ್ ಚಿಂಚನಸೂರು :– 484 ಜನ ಕಾರ್ಮಿಕರಿಗೆ ನಾವು ಪರಿಹಾರ ಕೊಡಿತ್ತಿದ್ದೆವು. ಉಳಿದವರಿಗೆ ಕೊಡಬೇಕಾದಂಥ ಸಂದರ್ಭದಲ್ಲಿ ದಾವಣಗೆರೆಯ ಶಂಕರ್ ಟೆಕ್ಸ್‌ಟೈಲ್ಸ್ ಮಿಲ್‌ನವರು ಕೆ.ಆರ್.ಮಿಲ್ ನವರಂತೆ ನಮಗೂ ಪರಿಹಾರ ಕೊಡಬೇಕೆಂದು ಕೇಂದ್ರ ಸರ್ಕಾರಕ್ಕೆ ಮೊರೆ ಹೋದರು. ಆಗ ಸುಪ್ರೀಂ ಕೋರ್ಟ್ ಇದಕ್ಕೆ ತಡೆ ಮಾಡಿದೆ. ಕೊಡಲೇ ನಾವು ಭಾರತ ಸರ್ಕಾರದ ಜೊತೆ ಚರ್ಚೆ ಮಾಡಿ ಕೂಡಲೇ ತಡೆಯಾಜ್ಞೆ ತೆರವುಗೊಳಿಸಿ ಪರಿಹಾರವನ್ನು ಕೊಡಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಶ್ರೀ ತನ್ವೀರ್ ಸೇಠ್ : ನಾನು ಕೇಳುತ್ತಿರುವುದು ವೇತನ ಪರಿಹಾರ ಕೊಡುವಂಥದ್ದರ ಬಗ್ಗೆ. Official liquidator ರವರಿಂದ ಯಾವಾಗ ಕೊಡಿಸಿ ಕೊಡುತ್ತೀರಿ?

ಶ್ರೀ ಬಾಬುರಾವ್ ಚಿಂಚನಸೂರು . ಆದಷ್ಟು ಬೇಗ ಕೊಡಿಸುತ್ತೇವೆ.

ಶ್ರೀ ಕೆ.ಆರ್. ರಮೇಶ್ ಕುಮಾರ್ : ಯಾವ ಸುಪ್ರೀಂ ಕೋರ್ಟ್, ಏನು ಎಂದು ನನಗೆ ಅರ್ಥವಾಗುತ್ತಿಲ್ಲ. 30 ವರ್ಷಗಳ ಕಾಲ ಕಾರ್ಮಿಕರು, ಶ್ರಮಿಕರು ಉಪವಾಸ ಸಾಯಬೇಕು ಎಂದು ಸುಪ್ರೀಂ ಕೋರ್ಟ್ ಆದೇಶ ಕೊಡುತ್ತದೆಯೇ? ಇವರು ಏನು ಮಾತನಾಡುತ್ತಿದ್ದಾರೆ? ಇವರು ಒಂದು ಸರ್ಕಾರವಲ್ಲವೇ? ನೀವು ಮೂರು ದಿವಸ ಊಟ ಮಾಡದೇ ಇರಿ ನೋಡೋಣ 30 ವರ್ಷ ಅವರನ್ನು ಉಪವಾಸ ಇಟ್ಟಿದ್ದೀರಲ್ಲ, ನೀವು ಒಂದು ಮೂರು ದಿವಸ ಊಟ ಬಿಟ್ಟು ಇಲ್ಲಿ ಕುಳಿತರೆ ಏನು ಗತಿಯಾಗುತ್ತದೆ ಎಂದು

ನೋಡೋಣ. ನಿಮಗೆ ಯಾಕೆ ಜವಾಬ್ದಾರಿ ಕೊಡುತ್ತಾರೆ? Have you raised this matter before the Hon'ble Supreme Court?

ಶ್ರೀ ತನ್ವೀರ್ ಸೇಠ್ .– ಇದರಲ್ಲಿ ಎರಡು ವಿಚಾರಗಳಿವೆ ಭಾರತ ಸರ್ಕಾರದ ಕಾರ್ಮಿಕರಿಗೆ ಪರಿಹಾರ ಕೊಡುವುದು ಬೇರೆ, ಅದು 68 ಲಕ್ಷ ರೂಪಾಯಿಗಳು ಬಂದು ತಡೆಯಾಜ್ಞೆಯಾಗಿ ನಿಂತಿದೆ. ಕಾರ್ಮಿಕರ ವೇತನ ಪರಿಹಾರ official liquidator ರವರ ಹತ್ತಿರ ಏನಿದೆ, ಅದನ್ನು ಸಂದಾಯ ಮಾಡಲು ಸಚಿವರು ಏನು ಕ್ರಮ ತೆಗೆದುಕೊಳ್ಳುತ್ತಾರೆ? ಅಥವಾ ಬೆಂಗಳೂರಿಗೆ ಹೋದ ತಕ್ಷಣ ಒಂದು ಸಭೆ ಕರೆಯಿರಿ, ನಾನೂ ಬರುತ್ತೇನೆ, ನಾವು ಕುಳಿತು ಕೊಂಡು ಅದನ್ನು ಇತ್ಯರ್ಥ ಮಾಡಲು ಏನು ಮಾಡಬೇಕೋ ಅದನ್ನು ಮಾಡೋಣ.

ಶ್ರೀ ಬಾಬುರಾವ್ ಚಿಂಚನಸೂರು :– ಮಾನ್ಯ ಸದಸ್ಯರನ್ನು ಕರೆಸುತ್ತೇವೆ. ಅವರ ಸಮ್ಮುಖದಲ್ಲೇ ಆದಷ್ಟು ಬೇಗ ಪರಿಹಾರ ಕೊಡಲು ನಾವು ಕ್ರಮ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು : ಲಿಕ್ವಿಡೇಟರ್‌ರವರ ಹತ್ತಿರ ಇರುವ ದುಡ್ಡನ್ನು ಕೊಡಲು ಏನು ತೊಂದರೆ ಎಂದು ಕೇಳುತ್ತಿದ್ದಾರೆ.

ಶ್ರೀ ಬಾಬುರಾವ್ ಚಿಂಚನಸೂರು : ಮಾನ್ಯ ಸದಸ್ಯರನ್ನು ಕರೆಸಿ ಮೀಟಿಂಗ್ ಮಾಡಿ ಅವರ ಸಮ್ಮುಖದಲ್ಲೇ ಆದಷ್ಟು ಬೇಗ ಪರಿಹಾರ ಕೊಡಲು ಸೂಕ್ತ ಕ್ರಮ ಕೈಗೊಳ್ಳುತ್ತೇವೆ.

ಅಧ್ಯಕ್ಷರು : ಅದನ್ನು ಕೊಡಲು ತೊಂದರೆಯೇನು?

ಶ್ರೀ ಬಾಬು : ಸ್ಟೇ ಆರ್ಡರ್ ಇದೆ. ಸ್ಟೇ ವೆಕೇಟ್ ಆಗುವವರೆಗೆ ಅದನ್ನು ಕೊಡಲು ಬರುವುದಿಲ್ಲ.

ಅಧ್ಯಕ್ಷರು : ಸ್ಟೇ ಯಾವಾಗ ಕೊಟ್ಟರು? ಸ್ಟೇ ವೆಕೇಟ್ ಮಾಡಲು ನೀವು ಏನು ಪ್ರಯತ್ನ ಮಾಡಿದಿರಿ?

ಶ್ರೀ ಬಾಬುರಾವ್ ಚಿಂಚನಸೂರು (ಮಾನ್ಯ ಜವಳಿ, ಬಂದರು ಮತ್ತು ಒಳನಾಡು ಸಾರಿಗೆ ಸಚಿವರು): ಇದರ ಬಗ್ಗೆ ಭಾರತ ಸರ್ಕಾರದ ಜೊತೆ ಚರ್ಚೆ ನಡೆಸಬೇಕು ಚರ್ಚೆ ಆಗಿ ತೆರವುಗೊಳಿಸಿದರೆ ಪರಿಹಾರಧನ ಕೊಡಲಾಗುವುದು.

ಅಧ್ಯಕ್ಷರು :– ನಾನು ಕೇಳಿದ್ದೇ ಒಂದು, ತಾವು ಹೇಳುತ್ತಿರುವುದೇ ಒಂದು. Stayಯಾವಾಗ ಆಗಿದೆ?

ಶ್ರೀ ತನ್ವೀರ್ ಸೇಠ್ .– ಮಾನ್ಯ ಅಧ್ಯಕ್ಷರೆ, ಇಲಾಖೆಯ ಅಧಿಕಾರಿಗಳು ಏನು ಉತ್ತರ ಕೊಡುತ್ತಾರೆ ಎಂದು ಕೇಳುವುದಕ್ಕೆ ಹೇಳಿ.

ಅಧ್ಯಕ್ಷರು :– Stay order ಅನ್ನು table ಮೇಲೆ ಇಡಲು ಹೇಳಿ. Stay Vacate ಮಾಡಲು ತಾವು ಏನು attempt ಮಾಡಿದ್ದೀರಿ, ಅದರ paper ಇಡಲು ಹೇಳಿ.

ಶ್ರೀ ತನ್ವೀರ್ ಸೇಠ್ :– ಇದರಲ್ಲಿ ಎರಡು ಭಾಗಗಳು ಇದೆ. ಕಾರ್ಮಿಕರಿಗೆ ಮೂಲ ವೇತನ ಪರಿಹಾರ ಒದಗಿಸಬೇಕಾಗಿತ್ತು. ಅದು official Liquidator ನವರ ಹತ್ತಿರ ಇದೆ.

ಅಧ್ಯಕ್ಷರು :– ಮತ್ತೆ ಅದನ್ನೇ ಹೇಳಿವುದಕ್ಕೆ ಹೋಗುತ್ತೀರಿ. ಮುಂದೆ ಹೇಳಿ. Basic issue is, ಅವರ Stay ಇದೆ ಎಂದು ಹೇಳುತ್ತಾರೆ. Stay ಇದ್ದಾರೆ ಅದನ್ನು vacate ಮಾಡಲು ಏನು ಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ತನ್ವೀರ್ ಸೇಠ್ :– Stay ಇರುವಂಥದ್ದು ಕೇಂದ್ರ ಸರ್ಕಾರದ Textile Workers Re-habilitation fund. ಬಗ್ಗೆ.

ಅಧ್ಯಕ್ಷರು :– ವಿಷಯ ನಿಮಗೂ ಗೊತ್ತಿದೆ.

ಶ್ರೀ ತನ್ವೀರ್ ಸೇಠ್ :– ಹೌದು ಸರ್ Stayಎಂದರೆ ಆ ಹಣ ಇವರ ಹತ್ತಿರ ಸಂದಾಯವಾಗಿದೆ.

ಅಧ್ಯಕ್ಷರು :– ಅದಕ್ಕೆ ಈಗ ಏನು ಮಾಡಬೇಕೆಂದು ಹೇಳಿ.

ಶ್ರೀ ತನ್ವೀರ್ ಸೇಠ್ :– ಇದರ ಬಗ್ಗೆ ಬಹಳ ಹಿಂದೆಯೇ ಪತ್ರವನ್ನು ಬರೆದಿದ್ದೇನೆ. Stay vacate ಮಾಡಲು ಏನು ಕ್ರಮವನ್ನು ಜರುಗಿಸಿಲ್ಲ. ಕಾರ್ಮಿಕರ ಮೂಲ ವೇತನ ಪರಿಹಾರ ಏನಿದೆ ಅದು official liquidator ನವರ ಹತ್ತಿರ ಇದೆ. ಅದನ್ನು ಕೊಡಿಸಿಕೊಡಬೇಕು. ಅದಕ್ಕೆ ಏನು Stay ಇಲ್ಲ.

ಅಧ್ಯಕ್ಷರು :– ಮಾನ್ಯ ಸಚಿವರೆ, ಮಾನ್ಯ ಸದಸ್ಯರು Stay ಇಲ್ಲವೆಂದು ಹೇಳುತ್ತಿದ್ದಾರಲ್ಲಾ. ಮಾನ್ಯ ಸದಸ್ಯರನ್ನು ಹಾಗೂ Law Secretary ನವರನ್ನೂ ನಿಮ್ಮ chamber ಗೆ ಕರೆಸಿ ಚರ್ಚೆ ಮಾಡಿ ತೀರ್ಮಾನ ತೆಗೆದುಕೊಳ್ಳಿ.

ಶ್ರೀ ತನ್ವೀರ್ ಸೇಠ್ :– ಸದನಕ್ಕೆ ತಪ್ಪು ಮಾಹಿತಿ ಹೋಗುವುದು ಬೇಡ. ಮಾನ್ಯ ಸಚಿವರು ಅನವಶ್ಯಕವಾಗಿ ಬೇರೆ ಭರವಸೆ ಕೊಡುವುದು ಬೇಡ. Official Liquidator ನವರ ಹತ್ತಿರ ಇರುವ ಹಣವನ್ನು ಕಾರ್ಮಿಕರಿಗೆ ಸಂದಾಯ ಮಾಡಿಸುವುದಕ್ಕೆ ತಕ್ಷಣ ಕ್ರಮ ತೆಗೆದುಕೊಳ್ಳಬೇಕು.

ಅಧ್ಯಕ್ಷರು: ಮಾನ್ಯ ಸಚಿವರು ಅದಕ್ಕೆ Supreme Court ನ Stay ಇದೆ ಎಂದು ಹೇಳಿದರು.

ಶ್ರೀ ತನ್ವೀರ್ ಸೇಠ್ :– ವೇತನ ಪರಿಹಾರಕ್ಕೆ stay ಇಲ್ಲ.

ಅಧ್ಯಕ್ಷರು :– ಮಾನ್ಯ ಸಚಿವರೆ, ಮಾನ್ಯ ಸದಸ್ಯರು stay ಇಲ್ಲವೆಂದು ಹೇಳುತ್ತಿದ್ದಾರೆ.

ಶ್ರೀ ತನ್ವೀರ್ ಸೇಠ್ :– Stay ಇಲ್ಲ. ಅಧಿಕಾರಿಗಳನ್ನು ಕೇಳಿ ಹೇಳಿ. ಅಧಿಕಾರಿಗಳು ಯಾರೂ ಇಲ್ಲವೇ? ಏನು ಮಾಡುತ್ತಿದ್ದಾರೆ? ವೇತನ ಪರಿಹಾರ ಒಂದು ರೂಪ. ಎರಡನೆಯದು ಕೇಂದ್ರ ಸರ್ಕಾರದ ಜೊತೆ ಮಾತುಕತೆ ಆಗಬೇಕು.

ಅಧ್ಯಕ್ಷರು :– Official Liquidator ನವರ ಹತ್ತಿರ ಏನು ಹಣ deposit ಇದೆಯಲ್ಲಾ ಆ ಹಣವನ್ನು ಕೊಡುವುದಕ್ಕೆ ಸುಪ್ರೀಂ ಕೋರ್ಟ್‌ನಿಂದ stay ಇಲ್ಲ, ಆ ಹಣ ಕೊಡಬಹುದಲ್ಲಾ ಎಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ. ಅದಕ್ಕೆ ನಿಮ್ಮ ಉತ್ತರ ಏನು?

ಶ್ರೀ ಬಾಬುರಾವ್ ಚಿಂಚನಸೂರು : ಸುಪ್ರೀಂ ಕೋರ್ಟ್ ಮಟ್ಟದಲ್ಲಿ stay ಇದೆ ಮಾನ್ಯ ಸದಸ್ಯರನ್ನು ಕರೆದು ಚರ್ಚೆ ಮಾಡುತ್ತೇನೆ.

ಶ್ರೀ ತನ್ವೀರ್ ಸೇಠ್ :– ಚರ್ಚೆಗೆ ಬರಲು ಸಿದ್ಧನಿದ್ದೇನೆ. ಈ ರೀತಿ ಬಂದಾಗ ನಿರ್ಲಕ್ಷ್ಯ ತೋರಬಾರದು. ನಿಮ್ಮ ಇಲಾಖೆಯ ಅಧಿಕಾರಿಗಳು ಯಾರೂ ಇಲ್ಲವೇ? ಏನು ಮಾಡುತ್ತಿದ್ದಾರೆ?

ಅಧ್ಯಕ್ಷರು :– ಮಾನ್ಯ ಸಚಿವರೆ ಉತ್ತರವನ್ನು ನೀಡಿ

ಶ್ರೀ ಬಾಬುರಾವ್ ಚಿಂಚನಸೂರು :– ಅಲ್ಲಿ K R Mill ನೌಕರರ 1000 ಕುಟುಂಬಗಳು ಇವೆ, 6 ತಿಂಗಳ ಮುಂಚೆ ಅವರೆಲ್ಲರನ್ನೂ ಹೊರಗಡೆ ಹಾಕಬೇಕೆಂದು ಮನವಿ ಮಾಡಲಾಗಿದೆ.

ಅಧ್ಯಕ್ಷರು : ಆ ವಿಚಾರ ಬೇಡ.

ಶ್ರೀ ಬಾಬುರಾವ್ ಚಿಂಚನಸೂರು : ಇದೇ ನೌಕರರದ್ದು, ಇವರೇ ವಾಸ ಮಾಡುತ್ತಿರುವಂತಹ ಮನೆಗಳು. ಇದೇ K R Mill ಗೆ ಸೇರಿರುವಂತಹ ಜಾಗ ಅವರಿಗೆ ಬೇಕು ಎಂದು ಮನವಿ ಮಾಡಿದ್ದಾರೆ. ಮನೆಯನ್ನೂ ಖಾಲಿ ಮಾಡಿ ಎಂದು ಮಾಡಿದ್ದಾರೆ. ಅದರ ಬಗ್ಗೆಯೂ ಗಮನಹರಿಸುತ್ತೇನೆ.

ಅಧ್ಯಕ್ಷರು :– ಮನೆಗಳ ಬಗ್ಗೆ ಇಲ್ಲಿ ಪ್ರಶ್ನೆ ಇಲ್ಲ, ಇದಕ್ಕೆ specific ಆಗಿ ಉತ್ತರ ಹೇಳಿ ಇಲ್ಲವೆಂದರೆ ಇದು privilege ಆಗುತ್ತದೆ. ಮಾನ್ಯ ಸದಸ್ಯರು ಅದಕ್ಕೆ Stay ಇಲ್ಲವೆಂದು ಹೇಳುತ್ತಿದ್ದಾರೆ, ನೀವು Stay ಇದೆ ಎಂದು ಹೇಳಿತ್ತಿದ್ದೀರಿ.

ಶ್ರೀ ಬಾಬುರಾವ್ ಚಿಂಚನಸೂರು :– ಉತ್ತರದಲ್ಲಿದೆ. ಮಾನ್ಯ ಸದಸ್ಯರನ್ನು ಕರೆದು ಚರ್ಚೆ ಮಾಡಿ ತೀರ್ಮಾನವನ್ನು ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು :– ಚರ್ಚೆ ಮಾಡಿ ಉತ್ತರವನ್ನು ನಾಳೆ ಕೊಡಿ. Let him come out with specific answer

ಶ್ರೀ ತನ್ವೀರ್ ಸೇಠ್ :– ಮಾನ್ಯ ಕಾನೂನು ಸಚಿವರು ಮಧ್ಯಪ್ರವೇಶ ಮಾಡಬೇಕು.

ಶ್ರೀ ಟಿ.ಬಿ. ಜಯಚಂದ್ರ .–30 ವರ್ಷಗಳಿಂದ ವಿವಾದ ಇತ್ಯರ್ಥ ಆಗಿಲ್ಲದಿರುವಂಥದ್ದು, ದಯಮಾಡಿ ಎಲ್ಲಾ ಸದಸ್ಯರನ್ನು ಕರೆದು ಮಾನ್ಯ ಸಚಿವರು ಚರ್ಚೆ ಮಾಡಲಿ. ಅವಶ್ಯವಿದ್ದರೆ ನಾನೂ ಕೂಡ ಚರ್ಚೆಗೆ ಹೋಗುತ್ತೇನೆ.

ಅಧ್ಯಕ್ಷರು :– ಈ ಸಂಬಂಧ ಮಾನ್ಯ ಕಾನೂನು ಸಚಿವರ chamber ನಲ್ಲಿ ಕುಳಿತು ಚರ್ಚೆ ಮಾಡಿ. ಪ್ರಶ್ನೋತ್ತರ ವೇಳೆ ಮುಕ್ತಾಯವಾಯಿತು. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳನ್ನು ಮಂಡಿಸುವುದು.

ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :– ಮಾನ್ಯ ಅಧ್ಯಕ್ಷರೆ, ದಿನಾಂಕ 25.11.2013 ರ ಮೊದಲನೇ ಪಟ್ಟಿಯಿಂದ ಲಿಖಿತ ಮೂಲಕ ಉತ್ತರಿಸುವ 119 ಪ್ರಶ್ನೆಗಳ ಪೈಕಿ 111 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು :– ಮಂಡಿಸಲಾಗಿದೆ.